**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>**

**ಸಿ.ಸಿ.ನಂ.4732/2023**

PW -04
CW-04

ಸಾಕ್ಷಿದಾರನ ಹೆಸರುಃ- ಬಲರಾಮೆಗೌಡ
ತಂದೆಯ ಹೆಸರು ಲೇಟ್ ಚನ್ನಯ್ಯ
ವಯಸ್ಸು 55 ವರ್ಷ
ಉದ್ಯೋಗ ವ್ಯವಸಾಯ
ವಾಸ ತಾವರೆಕೆರೆ

**<u>ಸಾಕ್ಷಿಗೆ ದಿಃ 24.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ಸುಮಾರು 2 - 3 ವರ್ಷಗಳ ಹಿಂದೆ ನಮ್ಮ ಮನೆಯ ಹತ್ತಿರ ಇರುವ ಸರ್ಕಲ್ ಬಳಿ ನನ್ನ ಸಹಿ ಪಡೆದಿರುತ್ತಾರೆ. ಆಗ ಸಮಯ ಸಂಜೆ ಆಗಿತ್ತು. ಅದರಲ್ಲಿರುವ ಮಾಹಿತಿಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುವನ್ನು ಜಪ್ತು ಮಾಡಿಕೊಂಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಲೀಸ್ಟ್ ಆಫ್ ಆರ್ಟಿಕಲ್ ನ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ 2 ಎಂದು ಸಹಿಯನ್ನುನಿ.ಪಿ 2(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.</u>**

ದಿಃ 29.07.2019 ರಂದು ಚಾಸಾ 2 ಮತ್ತು ಅವರ ಸಿಬ್ಬಂದಿ ನಮ್ಮ ಗ್ರಾಮಕ್ಕೆ ಬೇಟಿ ನೀಡಿ ನಮ್ಮನ್ನು ಬರಮಾಡಿಕೊಂಡು ಆರೋಪಿಯ ಪೆಟ್ಟಗೆ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ನಾವು ಒಪ್ಪಿ ಆರೊಪಿಯ ಅಂಗಡಿಗೆ ಹೋಗಿ ನೋಡಲಾಗಿ ಅಂಗಡಿಯಲ್ಲಿ ಮರದ ಶೋಕೇಶ್ ಇದ್ದು ಅದರ ಕೆಳಗೆ 1 ಬಿಳಿ ಚೀಲದಲ್ಲಿ 180 ಮಿಲಿಯಿ 8 ಪಿಎಂ. ವಿಸ್ಕಿಯ 2 ಟೆಟ್ರಾ ಪ್ಯಾಕೇಟಗಳುದ, 90 ಮಿಲಿಯ ಓಟಿ ವಿಸ್ಕಿಯ

2 ಟೆಟ್ರಾಪ್ಯಾಕೇಟಗಳು, 90 ಎಂ.ಎಲ್ ನ ನಂ 1 ಮ್ಯಾಕ್ ಡೊವೆಲ್ ಬ್ರಾಂಡಿಯ 4 ಟೆಟ್ರಾಪ್ಯಾಕೇಟಗಳು, 500 ಎಂ.ಎಲ್ನ ಕಿಂಗ್ ಪಿಷರ್ **ಸ್ಟ್ರಾಂಗ್** ಪ್ರೀಮಿಯಮ್ ಬಿಯರ್ 1 ಟಿನ್ ಮತ್ತು 330 ಎಂ.ಎಲ್. ನ ಕಿಂಗ್ ಪಿಷರ್ **ಸ್ಟ್ರಾಂಗ್** ಪ್ರಿಮಿಯಮ್ ಬಿಯರ್ 2 ಬಿಯಿರ್ ಕಂಡು ಬಂದಿರುತ್ತವೆ ಎಂದರೆ ಸರಿಯಲ್ಲ. ಅವುಗಳನ್ನು ನಮ್ಮ ಸಮಕ್ಷಮ ಪಂಚನಾಮೆ ಕ್ರಮವನ್ನು 6.45 ರಿಂದ 7.45 ರ ವರೆಗೆ ಜರುಗಿಸಿ ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿ ಮು. ಮಾ ಅನ್ನು ವಶವಡಿಸಿಕೊಂಡಿದ್ದರೂ ಸಹ ಮತ್ತು ನಾನು ನನ್ನ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**